## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್.50/2021

ಸಾಕ್ಷಿಯನ್ನು ದಿಃ **24.01.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿಯರ ಪರಃ ಶ್ರೀ. ಡಿಕೆ ವಕೀಲರಿಂದ**:

ದಾವಾ ಸ್ವತ್ತನ್ನು ನನಗೆ ಕ್ರಯದ ಮೂಲಕ ಬಂತು ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಕೆ.ಸ್ವಾಮಿ ಎಂಬುವವರಿಗೆ 1974ರಲ್ಲಿ ಸರ್ಕಾರದಿಂದ ಮಂಜೂರಾಗಿದ್ದು, ಅವರ ಹೆಂಡತಿ ಮಕ್ಕಳಾದ ಲಕ್ಷ್ಮಮ್ಮ, ಶೋಭಾ, ರತ್ನಮ್ಮ, ದೇವರಾಜು, ಲತಾ ರವರಿಂದ ನಾನು ದಿಃ 02.03.2007 ರಲ್ಲಿ ರೂ.3 ಲಕ್ಷಕ್ಕೆ ಖರೀದಿಸಿದ್ದೇನೆ ಎಂದರೆ ಸರಿ. 1979ರಲ್ಲಿ ದಾವಾ ಸ್ವತ್ತಿನ ಬಗ್ಗೆ ಕೆ.ಸ್ವಾಮಿರವರಿಗೆ ಮಂಜೂರಾತಿ ಪತ್ರ ವಿತರಿಸಲಾಗಿತ್ತು ಎಂದರೆ ಗೊತ್ತಿಲ್ಲ. 2007ರಲ್ಲಿ ನಾನು ದಾವಾ ಸ್ವತ್ತನ್ನು ಖರೀದಿಸುವಾಗ ಅದಕ್ಕೆ ಸಂಬಂಧಿಸಿದ ಮೂಲ ಮಂಜೂರಾತಿ ಪತ್ರವನ್ನು ಕೆ.ಸ್ವಾಮಿರವರ ಹೆಂಡತಿ ಮತ್ತು ಮಕ್ಕಳು ನನಗೆ ಕೊಟ್ಟರು ಎಂದರೆ ಸರಿ. 2007ರಲ್ಲಿ ನಾನು ಕೆ.ಸ್ವಾಮಿರವರ ವಾರಸುದಾರರಿಂದ ಸ್ವೀಕರಿಸಿದ ಮೂಲ ಮಂಜೂರಾತಿ ಪತ್ರ ಮತ್ತು ಇತರೆ ಮೂಲ ದಾಖಲೆಗಳನ್ನು ದಿಃ04.08.2014ರಲ್ಲಿ ವಾದಿಗೆ ಕೊಟ್ಟೆ ಎಂದರೆ ಇಲ್ಲ. ಈಗ ಸದರಿ ದಾಖಲೆಗಳು ಎಲ್ಲಿವೆ ಎಂದರೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ದಿ 04.08.2014ರಂದು ಮೂಾಲ ದಾಖಲೆಗಳನ್ನು ನಾನು ವಾದಿಗೆ ಕೊಟ್ಟಿದ್ದರೂ ಸಹ ಮರೆಮಾಚಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಮೂಲ ಮಂಜೂರಾತಿ ಪತ್ರವನ್ನು ಕೆ.ಸ್ವಾಮಿರವರ ವಾರಸುದಾರರು ನನಗೆ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ದಿಃ 04.08.2014ರಲ್ಲಿ ವಾದಿಗೆ ಕೊಟ್ಟೆ ಎಂದರೆ ಅವರು ಇಟ್ಟುಕೊಂಡರು. ರಈಗ ತೋರಿಸುತ್ತಿರುವ ಮೂಲ ಪಟ್ಟಾ ಮತ್ತು ರಶೀದಿ ಪುಸ್ತಕವನ್ನು 2007 ರಲ್ಲಿ ಕೆ.ಸ್ವಾಮಿರವರ ವಾರಸುದಾರರು ನನಗೆ ಕೊಟ್ಟಿದ್ದಾರೆ ಎಂದರೆ ಸರಿ. ಅದನ್ನು ದಿಃ04.08.2014 ರಂದು ನಾನು ವಾದಿಗೆ ಕೊಟ್ಟೆ ಎಂದರೆ ಅವರೇ ಇಟ್ಟುಕೊಂಡರು. ಸದರಿ ದಾಖಲೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿನ 11–ಇ ಸ್ಕೇಚ್ ಮಾಡಿಸಲು ದಿಃ 31.07.2014 ರಂದು ನಾನು ಅರ್ಜಿ ಕೊಟ್ಟಿಲ್ಲ. ಈಗ ತೋರಿಸುತ್ತಿವ ದಾಖಲೆ ದಿಃ 31.07.2014 ರಂದು 11–ಇ ಸ್ಕೇಚ್ ಸಲುವಾಗಿ ನಾನು ನೀಡಿದ ಅರ್ಜಿಯ ದಾಖಲೆ ಎಂದರೆ ಸರಿಯಲ್ಲ. ದಿಃ 31.07.2014ರಂದು ದಾವಾ ಸ್ವತ್ತಿನ ಬಗ್ಗೆ 11–ಇ ಸ್ಕೇಚ್ ಮಾಡಿಸಲು ನಾನು ಅರ್ಜಿ ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಅರ್ಜಿಯ ಪ್ರಕಾರ ಇಲ್ಲಿಯವರೆಗೆ 11–ಇ ಸ್ಕೇಚ್ ಆಗಿಲ್ಲ ಎಂದರೆ ಸರಿ. ದಿಃ 15.09.2016 ರಂದು ಉಪವಿಭಾಗಾಧಿಕಾರಿ ದಾವಾ ಸ್ವತ್ತನ್ನು ಏಕವ್ಯಕ್ತಿ ಪೋಡ್ ಮಾಡುವಂತೆ ಆದೇಶ ಮಾಡಿದರು ಎಂದರೆ ಗೊತ್ತಿಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.